ಬೇಕಾಗಿರುತ್ತದೆ. ತಮಗೆ ತಿಳಿದ ಪ್ರಕಾರ ಈ ವರ್ಷ ೬೯ ಸಾವಿರ ರೂಪಾಯಿಗಳಿಗೆ ಪ್ರಸ್ತಾವನೆಯನ್ನು ಜಿಲ್ಲಾ ಪರಿಷತ್ ಎಂಜಿನಿಯರಿಂಗ್ ವಿಭಾಗದವರು ಸಲ್ಲಿಸಿರುತ್ತಾರೆ. ಕಟ್ಟಡ ರಿಪೇರಿ ಮಾಡುವುದಕ್ಕೆ ಅವರು ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಕೆ. ಸೋಮಪ್ಪ ಸುವರ್ಣ.— ಈಗಾಗಲೇ ಆಸ್ಪತ್ರೆಗಳಿಗೆ ಎಕ್ಸರೇ ಪ್ಲಾಂಟ್‌ಗಳನ್ನು ಕೊಟ್ಟಿದ್ದಾರೆ. ಇವು ಎರಡು ಲಕ್ಷ ರೂಪಾಯಿ ಬೆಲೆ ಬಾಳುತ್ತವೆ. ಎಕ್ಸರೇ ಪ್ಲಾಂಟ್‌ಗಳನ್ನು ಕೊಟ್ಟರೂ ಡಾಕ್ಟರ್‌ಗಳನ್ನು ಕೊಡಲಿಲ್ಲ. ಟೆಕ್ನೀಷಿಯನ್ಸ್‌ಅನ್ನು ಕೊಡಲಿಲ್ಲ. ಇದರಿಂದಾಗಿ ಇವು ಮಣ್ಣು ಹಿಡಿದು ತುಕ್ಕು ಹಿಡಿದು ಹಾಳಾಗುತ್ತಿವೆ. ಆದುದರಿಂದ ಎಕ್ಸ್‌ರೇ ಪ್ಲಾಂಟ್ ಆಪರೇಟ್ ಮಾಡುವುದಕ್ಕೆ ಬೇಕಾದಂಥ ಟೆಕ್ನೀಷಿಯನ್ಸ್ ಅನ್ನು ಅಪಾಯಿಂಟ್ ಮಾಡುವುದಕ್ಕೆ ಸರಕಾರ ಕ್ರಮ ಕೈಗೊಳ್ಳಬೇಕು.

ಶ್ರೀಮತಿ ಮನೋರಮಾ ಮಧ್ವರಾಜ್.— ಇದಕ್ಕೆ ಪ್ರತ್ಯೇಕವಾದ ಪ್ರಶ್ನೆ ಹಾಕಬೇಕು. ಏಕೆ ದರೆ ನಾನು ಈಗ ಸೂರತ್ಕಲ್ ಕ್ಷೇತ್ರದ ಆಸ್ಪತ್ರೆಗೆ ಸಂಬಂಧಪಟ್ಟಂತೆ ಉತ್ತರ ಕೊಡುತ್ತಿದ್ದೇನೆ.

ಶ್ರೀ ವಿಜಯಕುಮಾರ್ ಶೆಟ್ಟಿ.— ಜಿಲ್ಲಾ ಪರಿಷತ್‌ಗೆ ನಾವು ಹಲವಾರು ಸಲ ನಿವೇದಿಸಿಕೊಂಡಿದ್ದೇವೆ. ಅವರು ಮೆಡಿಸಿನ್ಸ್ ಕೊಡುವುದಕ್ಕೆ ಮಾತ್ರ ನಮಗೆ ಅಧಿಕಾರ ಇದೆ. ರಿಪೇರಿ ಬಗ್ಗೆ ಸರಕಾರಕ್ಕೆ ರಿಕ್ವೆಸ್ಟ್ ಮಾಡಿಕೊಳ್ಳಿ ಎಂದು ಹೇಳಿದ್ದಾರೆ. ಆದುದರಿಂದ ಆದಷ್ಟು ಬೇಗ ಬಹಳ ಆಗತ್ಯ ಇರುವುದರಿಂದ ಇದಕ್ಕೆ ಅಡಿಷನಲ್ ಅಮೌಂಟನ್ನು ದಯವಿಟ್ಟು ಸ್ಯಾಂಕ್ಷನ್ ಮಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಮನೋರಮಾ ಮಧ್ವರಾಜ್.— ಮಾನ್ಯ ಉಪಾಧ್ಯಕ್ಷೆಯವರೇ, ಈ ಬಗ್ಗೆ ಮಾನ್ಯ ಆರ್ಥ ಸಚಿವರ ಹತ್ತಿರ ಸಮಾಲೋಚನೆ ಮಾಡಿ ಏನಾದರೂ ಹಣವನ್ನು ಜಿಲ್ಲಾ ಪರಿಷತ್ ಮುಖಾಂತರ ಒದಗಿಸುವುದಕ್ಕೆ ಪ್ರಯತ್ನ ಉಂಟೆ ಎಂದು ಕೇಳುತ್ತೇನೆ.

ಹೆಗ್ಗಡದೇವನ ಕೋಟೆಯಿಂದ ಶ್ರೀಗಂಧ ಕಳ್ಳ ಸಾಗಾಣಿಕೆ

೧೭೯. ಶ್ರೀ ಎಂ. ಪಿ ವೆಂಕಟೇಶ್ (ಹೆಗ್ಗಡ ದೇವನಕೋಟೆ).— ಮಾನ್ಯ ಅರಣ್ಯ ಮತ್ತು ಪಶುಸಂಗೋಪನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

೧) ಹೆಗ್ಗಡದೇವನ ಕೋಟೆಯಿಂದ ಕೇರಳಕ್ಕೆ ಗೊಬ್ಬರದ ಸಾಗಾಣಿಕೆಯಲ್ಲಿ ಶ್ರೀಗಂಧ ಸಾಗುವಾನಿ ಬೀಟೆ ಮರಗಳ ಕಳ್ಳ ಸಾಗಾಣಿಕೆ ಆಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

೨) ಹಾಗಿದ್ದಲ್ಲಿ ಈ ಕಳ್ಳ ಸಾಗಾಣಿಕೆಯನ್ನು ತಡೆಯಲು ತೆಗೆದುಕೊಂಡ ಕ್ರಮಗಳೇನು?

ಶ್ರೀ ಬಿ. ಬಸವಲಿಂಗಪ್ಪ (ಅರಣ್ಯ ಹಾಗೂ ಪಶುಸಂಗೋಪನ ಮಂತ್ರಿಗಳು).—

೧) ಬಂದಿಲ್ಲ

೨) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎಂ.ಪಿ. ವೆಂಕಟೇಶ್.— ಮಾನ್ಯ ಅಧ್ಯಕ್ಷಣೀಯವರೇ, ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಹೆಗ್ಗಡದೇವನ ಕೋಟೆಯಿಂದ ಕೇರಳಕ್ಕೆ ಗೊಬ್ಬರದ ಸಾಗಾಣಿಕೆಯಲ್ಲಿ ಶ್ರೀಗಂಧ ಸಾಗುವಾನಿ ಬೀಟೆ ಮರಗಳ ಕಳ್ಳಸಾಗಾಣಿಕೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಹೇಳಿದ್ದಾರೆ. ನಾನು ಕಳೆದ ಅಧಿವೇಶನದಲ್ಲಿ ಒಂದು ಗಮನ ಸೆಳೆಯುವ ಸೂಚನೆ ಮುಖಾಂತರ ಮಾನ್ಯ ಅರಣ್ಯ ಸಚಿವರ ಗಮನಕ್ಕೆ ಈ ವಿಷಯ ತಂದಿದ್ದೆ. ಅಲ್ಲಿ ಮರಗಳ ಕಳ್ಳಸಾಗಾಣಿಕೆಯಾಗುತ್ತಿದೆ. ಗೊಬ್ಬರದ ಚೀಲಗಳಲ್ಲಿ ಮರ ಸಾಗಿಸುತ್ತಿದ್ದಾರೆ. ನಾನು ಸರ್ಕಾರದ ಗಮನಕ್ಕೆ ಸಹ ತಂದಿದ್ದೇನೆ. ಹೆಗ್ಗಡದೇವನ ಕೋಟೆ ಕೃಷಿ ಸಂಘದವರು ಗಲಾಟೆ ಸಹ ಮಾಡಿದ್ದಾರೆ. ಗೊಬ್ಬರದ ಚೀಲಗಳಲ್ಲಿ ಲಕ್ಷಾಂತರ ರೂಪಾಯಿಗಳಷ್ಟು ಬೆಲೆ ಬಾಳುವಂತಹ ಮರಗಳನ್ನು ಪ್ರತಿ ನಿತ್ಯ ಸುಮಾರು ೨೦೦ ಲಾರಿಗಳಷ್ಟು ಸಾಗಿಸುತ್ತಿದ್ದಾರೆ. ಮೈಸೂರಿನ ಗುಂಡ್ಲುಪೇಟೆ ರಸ್ತೆ ಮುಖಾಂತರ ಮತ್ತು ಹೆಗ್ಗಡದೇವನಕೋಟೆ ರಸ್ತೆ ಮುಖಾಂತರ ಎರಡೂ ಬಾರ್ಡರ್‌ಗಳಿಂದ ಕೇರಳಕ್ಕೆ ಮರ ಸಾಗಿಸುತ್ತಿದ್ದಾರೆ. ಈ ಲಾರಿಗಳನ್ನು ಚೆಕ್ ಮಾಡುವಂತಹ ಅವಕಾಶ ಇಲ್ಲಿ, ಗೋಣಿ ಚೀಲಗಳಲ್ಲಿ ಮರ ತುಂಬಿಕೊಂಡು ಲಾರಿಗಳಿಗೆ ಹಾಕಿ ಅದರ ಮೇಲೆ ಗೊಬ್ಬರ ಹಾಕಿಕೊಂಡು ಮರ ಸಾಗಿಸುತ್ತಾರೆ. ಅಲ್ಲಿ ವಂರಗಳು ದುರುಪಯೋಗವಾಗುತ್ತಿವೆ. ಇನ್ನು ಅರಣ್ಯ ಇಲಾಖೆಯಲ್ಲಿ ನಡೆದ ವರ್ಗಾವಣೆಗಳಲ್ಲಿ ಸಾಕಷ್ಟು ಭ್ರಷ್ಟಾಚಾರ ನಡೆದಿದೆ. ಅದೂ ಭ್ರಷ್ಟಾಚಾರ ಹೇಗೆ ನಡೆದಿದೆ, ಎಂದರೆ, ಹೋಟಲ್‌ಗಳಲ್ಲಿ ಇಡಿ ಸಾಂಬರ್‌ಗೆ ಒಂದು ರೇಟ್ ಇರುತ್ತದೆ ನೋಡಿ, ಆ ರೀತಿ ಅಧಿಕಾರಿಗಳು ದುಡ್ಡು ಕೊಟ್ಟು ವರ್ಗಾವಣೆ

ಮಾಡಿಸಿಕೊಂಡು ಬಂದಿರುತ್ತಾರೆ. ಯಾರು ೫೦ ಸಾವಿರ ರೂಪಾಯಿಗಳು ಕೊಡುತ್ತಾರೋ ಅವರು ತಮಗೆ ಬೇಕಾದ ಸ್ಥಳಗಳಿಗೆ ವರ್ಗಾವಣೆ ಮಾಡಿಸಿಕೊಂಡು ಬಂದು ಅಲ್ಲಿ ಅವರು ಕೊಟ್ಟ ಹಣವನ್ನು ವಸೂಲಿ ಮಾಡಿಕೊಳ್ಳಲು ಮರಗಳನ್ನು ಕಳ್ಳಸಾಗಾಣಿಕೆ ಮಾಡಿ ಹಣ ಮಾಡಿಕೊಳ್ಳುವುದಕ್ಕೆ ಪ್ರಯತ್ನಿಸುತ್ತಾರೆ. ಇಂತಹ ವಿಷಯ ಸರ್ಕಾರದ ಗಮನಕ್ಕೆ ಬಂದಿಲ್ಲವೆಂದರೆ ಹೇಗೆ? ಮರಗಳ ಕಳ್ಳಸಾಗಾಣಿಕೆ ಪ್ರತಿ ದಿವಸ ನಡೆಯುತ್ತಿದೆ. ಮತ್ತೆ ವರ್ಗಾವಣೆ ವಿಚಾರದಲ್ಲಿ ಹೇಳುವುದಾದರೆ ನನ್ನ ಕ್ಷೇತ್ರಕ್ಕೆ ೭-೮ ಜನ ಅರಣ್ಯ ಇಲಾಖೆ ಅಧಿಕಾರಿಗಳು ಬಂದಿದ್ದಾರೆ. ಅವರು ಕಳ್ಳ ಸಾಗಾಣಿಕೆ ಮಾಡುವವರು. ನಾನು ನನ್ನ ಕ್ಷೇತ್ರಕ್ಕೆ ಯಾರ್ಯಾರು ಅರಣ್ಯಾಧಿಕಾರಿಗಳು ಬೇಕು ಎಂದು ಪತ್ರ ಬರೆದಿದ್ದೆ. ಅದರ ಮೇಲೆ ಹಿಂದಿನ ಅರಣ್ಯಸಚಿವರು ಆರ್ಡರ್ ಮಾಡಿದರು. ಆದರೆ ಆ ನಂತರ ಬಂದ ಮಾನ್ಯ ಅರಣ್ಯ ಸಚಿವರು ನನ್ನ ಪತ್ರವನ್ನು ನೋಡಲೇ ಇಲ್ಲ. ಇವತ್ತು ಎಲ್ಲಾ ಅರಣ್ಯಾಧಿಕಾರಿಗಳು ಹಣ ಕೊಟ್ಟು ವರ್ಗಾವಣೆ ಮಾಡಿಸಿಕೊಂಡು ನನ್ನ ಕ್ಷೇತ್ರಕ್ಕೆ ಬಂದಿದ್ದಾರೆ. ಯಾರು ದುಡ್ಡು ಕೊಟ್ಟು ವರ್ಗಾವಣೆ ಮಾಡಿಸಿಕೊಂಡು ಬಂದಿರುತ್ತಾರೋ ಅವರು ಆ ಹಣವನ್ನು ಕಲೆಕ್ಷನ್ ಮಾಡಿಕೊಳ್ಳುವುದಕ್ಕೆ ಅಧಿಕಾರದ ದುರುಪಯೋಗ ಮಾಡುತ್ತಾರೆ.

ಶ್ರೀ ಬಿ. ಬಸವಲಿಂಗಪ್ಪ (ಅರಣ್ಯ ಸಚಿವರು). — ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ದೂರತಕ್ಕಂಥ ಮಾತು ಅವರಿಗೆ ಗೊತ್ತಿರಬೇಕು, ನಮಗೇನೂ ಗೊತ್ತಿಲ್ಲ. ಅವರು ಹೇಳಿದ್ದು ದುರುದ್ದೇಶದಿಂದ ಕೂಡಿದ್ದು. ಟ್ರಾನ್ಸ್‌ಫರ್ಸ್ ಎಲ್ಲಾ ನಾವೇ ಮಾಡಿದ್ದೇವೆ. ಮತ್ತೆ ಅಲ್ಲಿಗೆ ಒಳ್ಳೆಯವರನ್ನು ಹಾಕಬೇಕೆಂದು ಹಾಕಿದ್ದೇವೆ. ಅವರ ಅಭಿಪ್ರಾಯ ಏನೆಂದರೆ, ಟಿಂಬರ್ ಸ್ಮಗಲಿಂಗ್ ಮಾಡುತ್ತಾರೆಂದು. ಆ ಬಗ್ಗೆ ನಾವು ತೀವ್ರತರವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆನ್ನುವ ಬಗ್ಗೆ ಯೋಚನೆ ಮಾಡುತ್ತಿದ್ದೇವೆ. ನಾನು ಈ ಇಲಾಖೆಯನ್ನು ವಹಿಸಿಕೊಂಡು ಬಂದು ತಿಂಗಳಾಯಿತು. ಅಲ್ಲಿಂದ ಮರ ಎಲ್ಲಿಗೆ ಹೋಗುತ್ತಿದೆ ಎಲ್ಲಿಗೆ ಬರುತ್ತಿದೆ ಎನ್ನುತಕ್ಕಂಥ ಎಲ್ಲಾ ಮಾಹಿತಿ ನನಗೆ ಬರುತ್ತಿದೆ. ಟಿಂಬರ್ ಸ್ಮಗಲಿಂಗ್ ಮಾಡತಕ್ಕಂಥಾದ್ದಕ್ಕೆ ಹಲವಾರು ಕಾರಣಗಳು ಇವೆ. ಸ್ಮಗಲಿಂಗ್ ಆಗುವುದಿಲ್ಲವೆಂದು ಈಗ ನಾವು ಹೇಳುತ್ತೇವೆ. ಆದರೆ ಸ್ಮಗಲಿಂಗ್ ಆಗಿರತಕ್ಕಂಥಾದ್ದು ಪತ್ರಿಕೆಗಳಲ್ಲಿ ಬರುತ್ತದೆ. ಈ ಬಗ್ಗೆ ಯಾವ ರೀತಿ ನಾವು ಪ್ರತಿಬಂಧಕಾಜ್ಞೆಯನ್ನು ಹಾಕಬೇಕೆಂದು ತೀವ್ರತರವಾಗಿ ಯೋಚನೆ ಮಾಡುತ್ತಿದ್ದೇವೆ. ಪುನಃ ನಾವು ಯೋಚನೆ ಮಾಡಿ ನಾವು ಒಂದು ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆಂದು ನಾನು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಶ್ರೀ ಎಂ. ಪಿ ವೆಂಕಟೇಶ್. — ಮಾನ್ಯ ಅಧ್ಯಕ್ಷಣೀಯವರೇ, ಅಧಿಕಾರಿಗಳ ವರ್ಗಾವಣೆ ಬಗ್ಗೆ ಹೇಳುವುದಾದರೆ ದುಡ್ಡು ಕೊಟ್ಟು ಬಂದವರು ಮತ್ತೆ ದುಡ್ಡು ಮಾಡಲು ಅಧಿಕಾರದ ದುರುಪಯೋಗ ಮಾಡುತ್ತಾರೆ. ಅವ್ಯವಹಾರ ಮಾಡುತ್ತಾರೆ. ನಾನು ನನ್ನ ಕ್ಷೇತ್ರಕ್ಕೆ ಇಂತಹವರು ಒಳ್ಳೆಯ ಅಧಿಕಾರಿಗಳು ಇವ್ವಾರೆ. ಇವರನ್ನು ಹಾಕಿ ಎಂದು ಒಂದು ಪಟ್ಟಿ ಕೊಟ್ಟಿದ್ದೆ. ಈ ಅಧಿಕಾರಿಗಳು ಚೆನ್ನಾಗಿ ಕೆಲಸ ಮಾಡುತ್ತಾರೆಂದು ಹೇಳಿ ನಾನು ಪಟ್ಟಿ ಕೊಟ್ಟರೆ ಮಾನ್ಯ ಮಂತ್ರಿಗಳು ನನ್ನ ಪತ್ರ ಬಿಸಾಕುತ್ತಾರೆ. ವರ್ಗಾವಣೆಯಲ್ಲಿ ಸಾಕಷ್ಟು ಭ್ರಷ್ಟಾಚಾರ ನಡೆಸಿದ್ದಾರೆ ಹಣ ತೆಗೆದುಕೊಂಡು ವರ್ಗಾವಣೆಗಳನ್ನು ಮಾಡಿದ್ದಾರೆ. ಈ ಎಲ್ಲಾ ವರ್ಗಾವಣೆಗಳು ಭ್ರಷ್ಟಾಚಾರದಿಂದ ಆದವುಗಳು.

ಶ್ರೀ ಬಿ. ಬಸವಲಿಂಗಪ್ಪ — ಅಧಿಕಾರಿಗಳ ಬಗ್ಗೆ ಮಾನ್ಯ ಸದಸ್ಯರಿಂದ ನನಗೆ ಸರ್ಟಿಫಿಕೇಟ್ ಬೇಕಾಗಿಲ್ಲ. ಅನೇಕ ವೇಳೆ ನಾವು ಒಳ್ಳೆಯವರನ್ನು ಅಲ್ಲಿಗೆ ಹಾಕಿದ್ದೇವೆ.

ಶ್ರೀ ಎಂ. ಪಿ ವೆಂಕಟೇಶ್. — ಹಣ ಕೊಟ್ಟು ವರ್ಗಾವಣೆ ಆಗಿ ಹೋದವರು ಅಧಿಕಾರದ ದುರುಪಯೋಗ ಮಾಡಿಕೊಳ್ಳುತ್ತಾರೆ, ಮಾನ್ಯ ಅಧ್ಯಕ್ಷರೇ ನಾನು ಒಂದು ವಿಷಯ ತಿಳಿದುಕೊಂಡಿದ್ದೆ. ಮಾನ್ಯ ಅರಣ್ಯ ಸಚಿವರು ಶಿಸ್ತುವುಳ್ಳವರು, ಅವರು ಶಿಸ್ತಿನ ಅಧಿಕಾರಿಗಳನ್ನು ಹುಡುಕುತ್ತಾರೆಂದು. ಆದರೆ ನನಗೆ ಒಬ್ಬರು ಹೇಳಿದರು, ಅವರು ಶಿಸ್ತುವುಳ್ಳವರು ಅಲ್ಲ. ನೀವು ವರ್ಗಾವಣೆ ಮಾಡಿಸುವಾಗ ೫೫-೪೦ ಸಾವಿರ ರೂಪಾಯಿಗಳ ದುಡ್ಡು ಕೊಟ್ಟಿದ್ದರೆ ನಿಮ್ಮ ಕೆಲಸ ಆಗುತ್ತಿತ್ತು. ದುಡ್ಡು ಕೊಟ್ಟ ಅಧಿಕಾರಿಗಳ ವರ್ಗಾವಣೆ ನಿಮ್ಮಲ್ಲಿಗೆ ಆಗಿದೆ ಎನ್ನುವ ಮಾತು ಹೇಳಿದರು. ತಾವು ಬೇಕಾದರೆ ಈ ಬಗ್ಗೆ ತನಿಖೆ ಮಾಡಿಸಿ, ನಾನು ರಾಜೀನಾಮೆ ಮಾಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ. — ಈ ಮಾತು ದುರುದ್ದೇಶದಿಂದ ಕೂಡಿದ್ದು.

ಶ್ರೀ ಎಂ.ಪಿ. ವೆಂಕಟೇಶ್. — ನಾನು ಪ್ರೂವ್ ಮಾಡುತ್ತೇನೆ. ತಾವು ಟ್ರಾನ್ಸ್‌ಫರ್ಸ್ ಏನುಮಾಡಿದ್ದೀರಿ, ಆ ಬಗ್ಗೆ ಸಂಪೂರ್ಣ ತನಿಖೆ ಆಗಬೇಕು. ವರ್ಗಾವಣೆ ವಿಷಯದಲ್ಲಿ ಏನೇನು ನಡೆದಿದೆ ಎಂದು ನಿಮ್ಮ ಪಕ್ಷದ ಶಾಸಕಾಂಗ ಸಭೆಯಲ್ಲಿ ಸಹ ಚರ್ಚೆ ಆಗಿದೆ. ಅದೆಲ್ಲಾ ಇಲ್ಲಿ ನಾನು ಹೇಳಂವುದು ಬೇಡ.

ಈ ಬಗ್ಗೆ ಇನ್ನೂ ಮುಂದೆ ಹೇಗೆ ಹೇಳಿದರೆ ಪರಿಹಾರವಾಗುವುದಿಲ್ಲ.

ಶ್ರೀ ಬಿ. ಎಸ್, ಯಡಿಯೂರಪ್ಪ.—ಇನ್ನು ಮುಂದೆಯಾದರೂ ಶ್ರೀಗಂಧವನ್ನು ಕೊಳ್ಳಿ ಹೊಡೆಯದೇ ಇರುವ ಹಾಗೆ ವ್ಯವಸ್ಥೆ ಮಾಡಿ.

ಉಪಾಧ್ಯಕ್ಷಣಿಯವರು.—ಮಾನ್ಯ ವೆಂಕಟಪ್ಪನವರೇ, ನಿಮ್ಮ ಪ್ರಶ್ನೆಗೆ ಉತ್ತರವನ್ನು ಕೊಡಲು ಮಾನ್ಯ ಸಚಿವರು ಟೈಮ್ ಕೇಳಿದ್ದಾರೆ, ಮುಂದೆ ಇದನ್ನು ತೆಗೆದುಕೊಳ್ಳೋಣ.

ಶ್ರೀ ಎಂ. ವಿ. ವೆಂಕಟಪ್ಪ.—ಸರ್ಕಾರದಲ್ಲಿ ಟೆಲಿಕ್ಸ್ ವ್ಯವಸ್ಥೆ ಇದೆ, ಎಸ್.ಟಿ.ಡಿ. ವ್ಯವಸ್ಥೆ ಇದೆ. ಕಂಪ್ಯೂಟರ್ ವ್ಯವಸ್ಥೆ ಇದೆ. ಇಷ್ಟೆಲ್ಲಾ ಇದ್ದುಕೊಂಡು ವಿಷಯ ಕಲೆಕ್ಟ್ ಮಾಡುವುದಕ್ಕಾಗಲಿಲ್ಲವೆಂದರೆ ಇದು ಎಂಥಾ ವ್ಯವಸ್ಥೆ ?

ಉಪಾಧ್ಯಕ್ಷಣಿಯವರು.—ಶ್ರೀ ಚೌಡರೆಡ್ಡಿಯವರು,

ಕೋಲಾರ ಜಿಲ್ಲಾ ಪರಿಷತ್ತಿನ ಅಧ್ಯಕ್ಷರಿಂದ ಮಾಡಲಾದ ದುರುಪಯೋಗ

೨೫೯. **ಶ್ರೀ ಚೌಡರೆಡ್ಡಿ (ಚಿಂತಾಮಣಿ).**—ಮಾನ್ಯ ಗ್ರಾಮಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ವಾರ್ತಾ ಮತ್ತು ಪ್ರಚಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಅಧ್ಯಕ್ಷರು, ಜಿಲ್ಲಾ ಪರಿಷತ್, ಕೋಲಾರದವರು ಜಿಲ್ಲಾ ಪರಿಷತ್ ಅನುಮೋದನೆಯಿಲ್ಲದೆ ಸುಮಾರು ೮೮ ಲಕ್ಷದ ಕಾಮಗಾರಿಗಳನ್ನು ಅನುಮೋದಿಸಿ ಅನುಷ್ಠಾನಗೊಳಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಅಧ್ಯಕ್ಷರು ಜಿಲ್ಲಾ ಪರಿಷತ್, ಕೋಲಾರದವರು ಕಾನೂನು ಕಟ್ಟಳೆಯನ್ನು ಮೀರಿ ಕ್ರಮ ಕೈಗೊಂಡಿರುವ ಬಗ್ಗೆ ಯಾವುದಾದರೂ ಪುನವಿ ಪತ್ರ ಬಂದಿದೆಯೇ ? ಬಂದಿದ್ದಲ್ಲಿ ಪುನವಿ ಪತ್ರ ಪಡೆದ ದಿನ ಹಾಗೂ ಮಾಡಿರುವ ದೂರುಗಳ ವಿವರ ?

ಇ) ಜಿಲ್ಲಾ ಪರಿಷತ್ ಅಧ್ಯಕ್ಷರ ಮೇಲೆ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತ್ ಕಾಯಿದೆಯನ್ವಯ ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಸಾಧ್ಯವಿದೆಯೇ ?

ಈ) ಹಾಗಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮವೇನು ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ವಾರ್ತಾ ಮತ್ತು ಪ್ರಚಾರ ಮಂತ್ರಿಗಳು).—

ಅ) ಹೌದು

ಆ) ಹೌದು, ದಿನಾಂಕ ೨೯-೬-೮೯, ಅಧ್ಯಕ್ಷ ಕೋಲಾರ ಜಿಲ್ಲಾ ಪರಿಷತ್‌ರವರು ಜಿಲ್ಲಾ ಪರಿಷತ್ತಿನ ಸಭೆಯ ಅನುಮತಿ ಇಲ್ಲದೆ ಕಾಮಗಾರಿ ಕೆಲಸಗಳನ್ನು ಕೈಕೊಳ್ಳಲು ಅಪ್ಪಣೆ ಮಾಡಿರುವ ಬಗ್ಗೆ ದೂರಿರುತ್ತಾರೆ.

ಇ) ಹೌದು, ಜಿಲ್ಲಾ ಪರಿಷತ್, ಕಾಯಿದೆ ಕಲಂ ೧೬೭ ರಂತೆ ಸರ್ಕಾರವು ಅಧ್ಯಕ್ಷರನ್ನು ದುರ್ವರ್ತನೆಗಾಗಿ ತೆಗೆಯಬಹುದು.

ಈ) ಸದರಿ ವಿಷಯವು ರಾಜ್ಯ ಶ್ರೇಷ್ಠ ನ್ಯಾಯಾಲಯದಲ್ಲಿ ಬಾಕಿ ಇರುವುದರಿಂದ ಸರ್ಕಾರವು ಯಾವುದೇ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ.

ಶ್ರೀ ಚೌಡರೆಡ್ಡಿ.—ಮಾನ್ಯ ಉಪಾಧ್ಯಕ್ಷಣಿಯವರೇ, ಕೋಲಾರ ಜಿಲ್ಲಾ ಪರಿಷತ್ತಿನ ಅಧ್ಯಕ್ಷರು ಜಿಲ್ಲಾ ಪರಿಷತ್ತಿನ ಅನುಮೋದನೆಯಿಲ್ಲದೆ ಸುಮಾರು ೮೮ ಲಕ್ಷ ರೂ. ಗಳ ಕಾಮಗಾರಿಗಳನ್ನು ಅನುಮೋದಿಸಿ ಅನುಷ್ಠಾನಗೊಳಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದರೆ ಹೌದು ಎಂದು ಹೇಳಿದ್ದಾರೆ. ಇದರ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು ಎಂದು ಕೇಳಿದ್ದಕ್ಕೆ, ಸದರಿ ವಿಷಯವು ರಾಜ್ಯ ಶ್ರೇಷ್ಠ ನ್ಯಾಯಾಲಯದಲ್ಲಿ ಬಾಕಿ ಇರುವುದರಿಂದ ಸರ್ಕಾರವು ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲವೆಂದು ಹೇಳಿದ್ದಾರೆ. ಈ ರೀತಿ ಏಕೆ ಉತ್ತರ ಕೊಡುತ್ತಾರೆ ?

ಶ್ರೀ ಎಂ. ವೈ. ಘೋರ್ಪಡೆ—ಮಾನ್ಯ ಉಪಾಧ್ಯಕ್ಷಣಿಯವರೇ, ಇದು ೭೧ ಲಕ್ಷ ರೂಪಾಯಿಗಳ ಕೆಲಸ. ದಿನಾಂಕ ೧೯-೫-೮೯ ರಂದು ಜಿಲ್ಲಾ ಪರಿಷತ್ತಿನ ಅಧ್ಯಕ್ಷರವರು ಇದನ್ನು ಪ್ರಾರಂಭ ಮಾಡಿದ್ದರು. ನಂತರ ಅವರ ಮೇಲೆ ದೂರು ಏನೆಂದರೆ, ಜಿಲ್ಲಾ ಪರಿಷತ್ತಿನ ಒಪ್ಪಿಗೆ ತೆಗೆದುಕೊಳ್ಳದೆ